ಅಸಲು ದಾವೆ ನಂಃ 397/2018 ಡಿ.ಡಬ್ಲ್ಯೂಃ 1- ಗೌಡಪ್ಪಗೌಡ
ತಂದೆ ಬಸನಗೌಡ ಪಾಟೀಲ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 27-07-2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಬಿ.ಎ.ಎಸ್. ವಾದಿ ಪರ ವಕೀಲರಿಂದಃ**

ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ದಾವಾ ಆಸ್ತಿಗಳ ಪ್ಲಾಟಗಳು ಮೂಲತಹ ಸರ್ವೆ ನಂ.205/2 ನೇದ್ದರ ಜಮೀನಿಗೆ ಸಂಬಂದಿಸಿದ್ದವು ಎಂದರೆ ನನಗೆ ಮಾಹಿತಿ ಇಲ್ಲ. ಬಿನ್ ಶೆತ್ಕಿ ಹೋಗುವ ಮೊದಲು ಸರ್ವೆ ನಂ.205/ಬ ಎಂದು ಇತ್ತು, ಅದು ಬಸಯ್ಯ ಹೀರೆಮಠ ರವರಿಗೆ ಸೇರಿತ್ತು. 1 ನೇ ವಾದಿಯ ತಂದೆ ಬಸಯ್ಯ ಹಿರೇಮಠ ಎಂದರೆ ಸರಿ. ಬಸಯ್ಯ ತೀರಿಕೊಂಡ ನಂತರ ವಾದಿಯರು ಸದರಿ ಜಮೀನನ್ನು ಬಿನ್ ಶೆತ್ಕಿ ಮಾಡಿಸಿದರು ಎಂದರೆ ನನಗೆ ಮಾಹಿತಿ ಇಲ್ಲ. ವಾದಿಯರು ಪ್ಲಾಟ ನಂ.621/1, 621/2 ಎ ಮತ್ತು 621/8 ನೇದ್ದವುಗಳನ್ನು ಹೊರತುಪಡಿಸಿ ಇನ್ನೂಳಿದ ಎಲ್ಲಾ ಪ್ಲಾಟಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಬಸಯ್ಯ ರವರ ಜೀವಿತ ಕಾಲದಲ್ಲಿ ಸದರಿ ಜಮೀನಿನ ಪೂರ್ವ ದಿಕ್ಕಿಗೆ ಸರಕಾರಿ ರಸ್ತೆ ಇತ್ತು ಎಂದರೆ ಸರಿ. ಸದರಿ ಜಮೀನಿನ ಉತ್ತರ ದಿಕ್ಕಿಗೆ ರೋಣ-ಗಜೇಂದ್ರಗಡ ಮುಖ್ಯ ರಸ್ತೆ ಇದೆ ಎಂದರೆ ಸರಿ. ಸದರಿ ಮುಖ್ಯ ರಸ್ತೆಯ ದಕ್ಷಿಣ ಭಾಗಕ್ಕೆ ಬಸಯ್ಯ ರವರ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಚೆಕ್ಕಬಂದಿಯ ಮಧ್ಯದಲ್ಲಿ ಇರುವ ಜಮೀನನ್ನು ಬಸಯ್ಯ ರವರು ತೀರಿಕೊಂಡ ನಂತರ ವಾದಿಯರು ಬಿನ್ ಶೆತ್ಕಿ ಮಾಡಿಸಿದರು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ರೋಣ-ಗಜೇಂದ್ರಗಡ ಮುಖ್ಯ ರಸ್ತೆಯ ದಕ್ಷಿಣಕ್ಕೆ ಹೊಂದಿಕೊಂಡು ರಾಜೂರ ಕಾತ್ರಾಳ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ 9 ಮೀಟರ ರಸ್ತೆ ಎಂದರೆ ಸರಿಯಲ್ಲ. ವಿ.ಪಿ.ಸಿ ನಂ.408/386 ಇದು ಮೂಲತಹ ರಾಜೂರ ಗ್ರಾಮದ ಮೇಗಳಮನಿಗೌಡರ ಸಾಮುಹಿಕ ಆಸ್ತಿ ಆಗಿತ್ತು. ಅದರ ಕುರಿತು ನ್ಯಾಯಾಲಯಕ್ಕೆ ಕಾಗದ ಪತ್ರಗಳನ್ನು ಹಾಜರುಪಡಿಸಿದ್ದೇನೆ. ಸನ್ 1967 ನೇ ಸಾಲಿನಿಂದ 2016 ರವರೆಗಿನ ಮೇಗಳಮನಿಗೌಡರ

ಸಾಮುಹಿಕ ಆಸ್ತಿ ಎಂದು ದಾಖಲೆ ಇರುವ ಪಂಚಾಯತಿ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಾನು ಹಾಜರು ಪಡಿಸಿದ ನನ್ನ ಪರವಾಗಿ ನಿಶಾನೆ ಒಳಪಟ್ಟ ದಾಖಲಾತಿಗಳಲ್ಲಿ ಸದರಿ ಪಂಚಾಯತಿ ದಾಖಲಾತಿ ಇರುವುದಿಲ್ಲ. ವಿ.ಪಿ.ಸಿ ನಂ.408/386 ನೇದ್ದರ ಆಸ್ತಿಯ ಅಳತೆ 150x75 ಇದೆ ಎಂದು ತೋರಿಸಲು ನಾನು ಪಂಚಾಯತಿಯ ಠರಾವು ಮತ್ತು ಉತಾರೆಯನ್ನು ಹಾಜರುಪಡಿಸಿದ್ದೇನೆ. ಅಂತಹಾ ಯಾವುದೇ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೇಗಲಮನೆಯವರು ವಿ.ಪಿ.ಸಿ ನಂ.408/386 ನೇದ್ದರ ಆಸ್ತಿಯನ್ನು ನಮ್ಮ ಸಂಘಕ್ಕೆ ಬಿಟ್ಟುಕೊಟ್ಟಿದ್ದಾರೆ ಎಂದು ತೋರಿಸಲು ನೊಂದಾಯಿತ ಪತ್ರ ಹಾಜರುಪಡಿಸಿಲ್ಲ. ಸನ್ 2016 ರಲ್ಲಿ ಮೊದಲಬಾರಿಗೆ ನಾವು ಪಂಚಯಾತಿಯವರೊಂದಿಗೆ ಮಿಲಾಪೆಯಾಗಿ ಸದಸ್ಯರನ್ನು ಬಲಿಪಶು ಮಾಡಿ 1 ಖೊಟ್ಟಿ ಠರಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸನ್ 2017 ರಲ್ಲಿ ಪ್ರಥಮ ಬಾರಿಗೆ ಸದರಿ ಸೃಷ್ಟಿ ಮಾಡಿದ ಠರಾವಿನ ಮೇರೆಗೆ ಸದರಿ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿದೇವು ಎಂದರೆ ಸರಿಯಲ್ಲ. ರಾಜೂರ ಕಾತ್ರಾಳ ರಸ್ತೆ ಯಾರ ಸ್ವತ್ತಲ್ಲ ಎಂದರೆ ಸಾಕ್ಷಿಯು ಅಂತಹ ರಸ್ತೆ ಇರುವುದಿಲ್ಲ ಎಂದು ನುಡಿದಿರುವರು. ಸದರಿ ರಸ್ತೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸನ್ 2017 ರಲ್ಲಿ ಪ್ರಥಮ ಬಾರಿಗೆ ಸದರಿ ರಸ್ತೆಯನ್ನು ಅತೀಕ್ರಮಣ ಮಾಡಿ ನಮ್ಮ ಹಕ್ಕನ್ನು ಚಲಾವಣೆ ಮಾಡಲು ಪ್ರಯತ್ನ ಮಾಡಿದೇವು ಎಂದರೆ ಸರಿಯಲ್ಲ. ವಿ.ಪಿ.ಸಿ ನಂ.408/386 ನೇದ್ದರ ಪೂರ್ವಕ್ಕೆ ಊರಿನ ಸರಕಾರಿ ರಸ್ತೆ, ಪಶ್ಚಿಮಕ್ಕೆ ಸರಕಾರಿ ಶಾಲೆ, ಉತ್ತರಕ್ಕೆ ರೋಣ-ಗಜೇಂದ್ರಗಡ ಮುಖ್ಯ ರಸ್ತೆ, ದಕ್ಷಿಣಕ್ಕೆ ಬಸಯ್ಯ ಹೀರೆಮಠ ರವರ ಸರ್ವೆ ನಂ.205/ಬ ಆಸ್ತಿ ಇರುತ್ತದೆ. ಸದರಿ ಚೆಕ್ಕ ಬಂದಿಯಲ್ಲಿ ಸದರಿ ಆಸ್ತಿ ಮೇಗಲಮನೆಯವರದ್ದು ಇತ್ತು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿದ್ದೇನೆ. ಆ ರೀತಿ ಯಾವುದೇ ಕಾಗದ ಪತ್ರವನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೊರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಮುಂದುವರೆದ ಪಾಟೀ ಸವಾಲಿಗಾಗಿ ಮುಂದುಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ,

Sd/-

(ಹುಲುಗಪ್ಪ ಡಿ.)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ (ಪೀಠಾಸಿನ ಗಜೇಂದ್ರಗಡ)